ಓ ಎಸ್ ನಂ.41/2022

ಡಿ.ಡಬ್ಲ್ಯೂ-1 ಈರಣ್ಣ ತಂದೆ ಅಣ್ಣರಾವ್ ಪಾಟೀಲ್

(ಇಂದು ದಿನಾಂಕಃ **31-01-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಜೆ ಜಿ ವಕೀಲರಿಂದ.

ಅಣ್ಣರಾವ್ ಪಾಟೀಲ್ ರವರಿಗೆ ನಾವು ೬ ಜನ ಮಕ್ಕಳಿರುತ್ತೇವೆ. ೧ನೇ ಪ್ರತಿವಾದಿ ಜಗದೇವಿ ನನ್ನ ಅಕ್ಕಳಾಗಿರುತ್ತಾಳೆ. ವಾದಿ ದೊಡ್ಡಮ್ಮ ನನ್ನ ತಂಗಿಯಾಗಿರುತ್ತಾಳೆ. ದಾವಾ ಆಸ್ತಿಗಳು ನಮ್ಮ ತಂದೆ ಗಳಿಸಿದ ಆಸ್ತಿಗಳಾಗಿರುತ್ತವೆ, ನಾವು ಯಾರೂ ಆಸ್ತಿ ಗಳಿಸಿಲ್ಲ ಎಂದರೆ ಸರಿ. ವಾದಿ ದೊಡ್ಡಮ್ಮರವರು ತಮ್ಮ ಗಂಡ ಮೃತನಾದ ನಂತರ ನಮ್ಮ ಊರಿನಲ್ಲಿಯೆ ಇದ್ದರು ಎಂದರೆ ಸಾಕ್ಷಿಯು ಅವರು ಗಂಡನ ಮನೆಗೆ ಹೋಗಿಯೆ ಇಲ್ಲ ಎನ್ನುತ್ತಾರೆ. ದೊಡ್ಡಮ್ಮರವರ ೧೭ ಎಕರೆ ಜಮೀನನ್ನು ನಾವೆ ಅವಳ ಸಹಿ ಪಡೆದು, ಮಾರಾಟ ಮಾಡಿ ಎಲ್ಲಾ ಹಣವನ್ನು ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಹಣದಲ್ಲಿ ನಿನಗೆ ಹೊಲ ಕೊಡಿಸಿಕೊಡುತ್ತೇವೆ ಮತ್ತು ಮನೆ ಕಟ್ಟಿಕೊಡುತ್ತೇವೆ ಎಂದು ಹೇಳಿದ್ದೇವು ಎಂದರೆ ಸರಿಯಲ್ಲ. ನಾವು ವಾದಿಗೆ ಯಾವುದೆ ಹೊಲ ಮತ್ತು ಮನೆ ನೀಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ವಾದಿಯ ಹೆಸರಿನಲ್ಲಿ ೧೨ ಎಕರೆ ಜಮೀನು ಇರುತ್ತದೆ ಎನ್ನುತ್ತಾರೆ. ಸದರಿ ಜಮೀನು ವಾದಿಯ ಗಂಡನ ಕಡೆಯಿಂದ ಬಂದಿದೆ ಎಂದರೆ ಸರಿ. ಸದರಿ ಜಮೀನು ನಮ್ಮ ಕುಟುಂಬದ್ದು ಅಲ್ಲ ಎಂದರೆ ಸರಿ. ನಾವು ವಾದಿಯ ಸಹಿ ಪಡೆಯದೆ ಒಂದು ಸುಳ್ಳು ಸ್ಟ್ಯಾಂಪ್ ಪೇಪರನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ ದೊಡ್ಡಮ್ಮರವರನ್ನು ಮತ್ತು ಅವರ ಮಕ್ಕಳನ್ನು ನಾವು ನೋಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ವಾದಿಯನ್ನು ನಾನು ನೋಡದೆ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಲ್ಲಿ ಪಾಲು ನೀಡಬೇಕಾಗುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.